

“ಏ... ಏ ಯಾರಲ್ಲಿ? ಏ... ಯಾರಿದ್ದೀರಿ ಮನೇಲಿ?” ಅತ್ತೆಯ ಕೂಗಾಟ ಕೇಳಿ ಅಟ್ಟದ ಮೇಲೆ ಮಂಚದಲ್ಲೊರಗಿದ್ದ ಜೀವಿಕಾ ನೋಡುತ್ತಿದ್ದ ಮೊಬೈಲು ಪಟ್ಟಂತ ಆಫ್ ಮಾಡಿ ಕೆಳಗಿಳಿದಳು.

“ಜೀವಿಕಾ ಏ ಎಲ್ಲಿದ್ದೀಯೆ?”

“ಬಂದೆ ಅತ್ತೆ.”

ಹಾಲ್‌ನಿಂದ ಹಿತ್ತಲಿಗೆ ಹೋಗುವ ಉದ್ದ ವರಾಂಡಾ, ಅದಕ್ಕೆ ಲಂಬವಾಗಿ ಹತ್ತೆಜ್ಜೆ ನಡೆದರೆ ಬರುವ ಅತ್ತೆಯ ರೂಮು, ಅವರ ಕಾಲಿನ ವಾಕರು – ಎಲ್ಲ ಪಾವಟಿಗೆ ಟಕಟಕಿಸುತ್ತಾ ಇಳಿವಾಗ ಚಿತ್ರದಂತೆ ಕಣ್ಮುಂದೆ ಬಂತು. ತಮ್ಮ ಕೋಣೆಯ ಮಂಚದ ಮೇಲೆ ಕೂತಲ್ಲಿಂದಲೇ ಬಾಗಿ ಹೊರಗೆ ನೋಡಲಂತೂ ಸಾಧ್ಯವೇ ಇಲ್ಲ. ವರಾಂಡಾ ದಾಟಿ ಹಿತ್ತಲಿಗೆ ಓಡಲು ಒಬ್ಬರಿಗೆ ಬಹಳವೆಂದರೆ ಅರ್ಧಾನೇ ನಿಮಿಷ. ಅಷ್ಟರಲ್ಲಿ ಅತ್ತೆ ವಾಕರು ಹಿಡಕೊಂಡು ಹಾಲಿಗೆ ಬಂದು ಕಳ್ಳನನ್ನು ನೋಡೋದು ಅಂದ್ರೆ ಕಂಡಿದ್ದೇನು ಗಿಡದ ನೆರಳೋ ಇಲ್ಲ ಮತ್ತೇನು ಮಣ್ಣೋ? ಮನದಲ್ಲೇ ಮಥಿಸಿದಳು. ಅಲ್ಲಾ, “ಯಾರಿದ್ದೀರಿ?” ಅಂತ ಕೂಗಿದ್ರೆ ಏನರ್ಥ? ಮನೇಲಿರೋದೇ ನಾನು ಮತ್ತು ಈ ಮುದುಕಮ್ಮ. ಅವಿನಾಶ ನಿತ್ಯದಂತೆ ಬ್ರೆಡ್ಡಿಗೆ ಜಾಮು ಮುಟ್ಟಿಸಿ ತಿಂದು, “ಜೋಪಾನ ಜೀವಿಕಾ” ಅಂತ ಹೇಳಿ ಯಾವಾಗ್ಲೋ ಆಫೀಸಿಗೆ ಹೋಗಿಯಾಯ್ತಲ್ಲ. ಅಲ್ಲ ಜೋಪಾನ ಯಾರಿಂದ ಅಂತ? ಅಕ್ಕಪಕ್ಕದವರ ನಗೆ ಕೇಕೆ ನುಸುಳಿ ಗಿಸಳಿ ಬಾಗಿಲಿಂದ ಒಳಗೆ ಬಂದೀತು ಜೋಪಾನ ಅಂತರ್ಥವೇ? ಫಳ್ಳನೆ ನಗುವುಕ್ಕಿತವಳಿಗೆ.

“ಜೀವಿಕಾ ಏನೇ ಮೆಟ್ಟಿಲು ಮೇಲೆ ನಿಂತ್ಕೊಂಡು ನಗ್ತಿದ್ದೀಯಾ ನಾನಿಲ್ಲಿ ಹೆದರಿ ಸಾಯ್ತಿದ್ದರೆ.”

“ಅಯ್ಯೋ ಬಂದೆ ಇರಿ ಅತ್ತೆ.”

ಸಮೀಪ ಬಂದದ್ದೇ ಆವೇಗದಿಂದ ಉಸಿರು ಬಿಡುತ್ತಾ ಶುರು ಮಾಡಿದರು.

“ಓಡಿ ಹೋದ ಕಣೆ ಇದೇ ಈಗ. ಅವನ ನೆರಳು ಚೆನ್ನಾಗೇ ಕಾಣ್ತು. ಅಲ್ಲಾ ದೀಪ ಹಚ್ಚೋ ಮುಸ್ಸಂಜೆಯಲ್ಲಿ ವರಾಂಡಾದ ಲೈಟು ಆರಿಸಿದ್ದೀಯಲ್ಲ! ಲೈಟಿದ್ದಿದ್ದರೆ ಮುಖ ಕಾಣಿಸೋದು.”

‘ಕಂಡಿದ್ದರೇನು? ಅವಂಗೂ ಅದೇ ಎರಡು ಕಣ್ಣು, ಒಂದು ಮೂಗು ಬಾಯಿ, ಏನು ಗೊತ್ತಾಗೋದು ನಿಮಗೆ?’ ಬಾಯ್ತುದಿಗೆ ಬಂದ ಮಾತು ತಡೆದಿದ್ದಳು.

ಮತ್ತೆ ವಾಕರು ಎತ್ತಿಡುತ್ತಾ ವರಾಂಡಾಕ್ಕಿದ್ದ ಕಿಡಕಿಯ ಪಕ್ಕಕ್ಕೆ ಹೋಗಿ, “ಇಲ್ಬಾ ಇಲ್ಬಾ ಬಾಗಿಲು ತೆಗೆದು ನೋಡು ಮೆತ್ತಗೆ, ಇನ್ನೂ ಅವಿತು ಕೂತುಕೊಂಡಾನೋ ಏನೋ ಯಾರಿಗ್ಗೊತ್ತು?” ಅಂತ ಪಿಸುಗುಟ್ಟಿದರು.

ಯಾಂತ್ರಿಕವಾಗಿ ಅವರ ಹಿಂದೆ ಹೋಗಿ ವರಾಂಡಾದ ಬಾಗಿಲು ತೆರೆದು ಕಿಡಕಿಯ ಕೆಳಗಿಂದ ಮನೆಯ ಒಂದು ಸುತ್ತು ಹಾಕಿ ಬಂದಳು. ಬರಿ ಎಲ್ಲಾ ಕಡೆ ಕೆಂಪು ಹಳದಿ ಟೈಲುಗಳ ಮೇಲೆ ಹವಾಯಿ ಚಪ್ಪಲುಗಳ ಮಸುಕು ಗುರುತುಗಳು. “ಅತ್ತೆ ಏನೂ ಇಲ್ಲ ಅಲ್ಲಿ ಅವಿ ಬೆಳಿಗ್ಗೆ ಗಿಡಗಳಿಗೆ ನೀರು ಹಾಕುವಾಗ ಮೂಡಿಸಿದ ಹೆಜ್ಜೆ ಗುರುತು ಬಿಟ್ಟರೆ.”

“ಏ ಮೂವತ್ತಕ್ಕೇ ಚಷ್ಮಾ ಬಂತೇನು ನೋಡೇ ನಿಂಗೆ? ಏನೋ ಸುಳಿವು ಇದ್ದೇ ಇರುತ್ತೆ. ಚೆನ್ನಾಗಿ ನೋಡಬೇಕಷ್ಟೆ. ಅಲ್ದೆ ಅದು ಹ್ಯಾಗೆ ಅಷ್ಟು ನಿರ್ಧಾರವಾಗಿ ಹೇಳ್ತಿಯಾ ಅವೀದೇ ಕಾಲ್ಗುರುತಂತಾ?”

ಸರ್ರನೆ ಸಿಟ್ಟೇರಿತು ಜೀವಿಕಾಗೆ. ಈ ಅತ್ತೆ ನನ್ನ ಕಡೆ ಕೆಟ್ಟ ಮಾತಾಡಿಸಬೇಕೆಂದೇ ಹೀಗಾಡ್ತಾರಾ ಹೇಗೆ? ಅಲ್ಲ ಪೊರೆ ಬಂದು ಕಳಚಿರೋದು ಇವರ ಕಣ್ಣುಗಳು. ನಾನು ಚಷ್ಮಾ ಹಾಕ್ಕೋಬೇಕಂತೆ.